# ವರ್ಷ ಭೈರವ



ಕವಿ ಕುವೆಂಪು ಮಲೆನಾಡಿನ ಸಹ್ಯಾದ್ರಿಯ ಗಿರಿಶ್ರೇಣಿಗಳ ಮಳೆಯನ್ನು ನೋಡುತ್ತಾ ಬೆಳೆದವರು. ಸಹ್ಯಾದ್ರಿಯ ಮಳೆಯ ಜೋರು ಬಯಲು ಸೀಮೆಯಲ್ಲಿ ಅಪರೂಪ. 'ದೊಡ್ಡ ಮಳೆ' ಬಿದ್ದರೂ ಅದನ್ನು ಸಹಿಸಿಕೊಳ್ಳುವ ಶಕ್ತಿ ಮತ್ತು ಸಹನೆಗಳು ಬಯಲು ಸೀಮೆಯ ಜನಕ್ಕೆ ಇರುವುದಿಲ್ಲ. ಆದರೆ ಮಲೆನಾಡಿನ ಮಳೆ ಎರಡು ಅತಿರೇಕಗಳ ನಡುವೆ ಸರಸವಾಡಿ ಸತಾಯಿಸುತ್ತದೆ. ಚಟಪಟ ಜಡಿಯಂತೆ ರೂಪ ತಾಳಿ ಭೀಕರ ಮಳೆಯಾಗಿ ಜಡಿದುಬಿಡುತ್ತದೆ; ಮರುಕ್ಷಣವೇ ಸಂಪೂರ್ಣ ನಿಂತು ಬಿಸಿಲಿಗೆ ಜಾಗ ಮಾಡಿಕೊಡುತ್ತದೆ; ಕ್ಷಣಾರ್ಧದಲ್ಲಿ ಕಾಮನಬಿಲ್ಲು ಮೂಡಿಸಿ ಹೃನ್ಮನಗಳನ್ನು ಮುದಗೊಳಿಸುತ್ತದೆ. ಗಿರಿಕಾನನಗಳ ಕಣಿವೆಯಲ್ಲಿ ತೊರೆಗಳೆದ್ದು ಕುಣಿದು ಸದ್ದು ಮಾಡಿ, ಮತ್ತೆ ಮಾಯವಾಗಿ ಜುಳುಜುಳು ಹರಿಯುವ ಝರಿಯಾಗಿ ಕಂಗೊಳಿಸುತ್ತವೆ. ಈ ಅತಿರೇಕ ಶಿವಲೀಲೆಯಂತೆ ಕವಿಗೆ ವಿಸ್ಮಯ ಮೂಡಿಸುತ್ತದೆ. ಇದನ್ನು ಕವಿ ಕುವೆಂಪು 'ವರ್ಷ ಭೈರವ' ಎಂಬ ಪದ್ಯದಲ್ಲಿ ಹಿಡಿದಿಡುವ ಪ್ರಯತ್ನ ಮಾಡುತ್ತಾರೆ.

ಕುವೆಂಪು ಮಲೆನಾಡಿನ ಮಳೆಯನ್ನು 'ವರ್ಷ ಭೈರವ' ಎಂದು ಕರೆಯುತ್ತಾರೆ. 'ಭೈರವ' ಶಿವನ ಸೌಮ್ಯ ರೂಪವನ್ನು ಅಭಿವ್ಯಕ್ತಿಸದು. ಅದು ಅವನ ವಿನಾಶ ಕಾಲಸ್ಥಿತಿಯ ಮನೋಸ್ಥಿತಿಯನ್ನು ತಿಳಿಸುತ್ತದೆ. ಭೈರವನ ರುದ್ರ ನರ್ತನದ ಕಾಲ್ತುಳಿತಕ್ಕೆ ಸಿಲುಕಿ ಬದುಕು ನಲುಗಿ ಹೋಗುತ್ತದೆ. ನಾಶ ಮಾಡುವುದೇ ಅವನ ಉದ್ದೇಶವಾಗಿರುವಾಗ ಬೇರೆ ಏನನ್ನು ತಾನೇ ನಿರೀಕ್ಷಿಸಲು ಸಾಧ್ಯ? ಅದನ್ನೇ ಕುವೆಂಪು 'ಮಳೆಯಲ್ಲಿದು, ಮಳೆಯಲ್ಲಿದು ಪ್ರಳಯದ ಆವೇಶ' ಎಂದು ಕರೆಯುತ್ತಾರೆ. ಪ್ರಳಯಕಾಲದ ಭೈರವನ ನರ್ತನದ ಗುರಿ ಸಾಧನೆಗೆ ಆವೇಶ ಬೇಕೇ ಬೇಕು! ಆ ಆವೇಶದಲ್ಲಿ ಸಿಕ್ಕಿದ್ದನ್ನೆಲ್ಲ ಆಪೋಶನ ಗೈಯುತ್ತಾ, ಸಾಗುವ ಮಳೆಗೆ ಪುರಾಣದ ಭೈರವನ ಆವೇಶವನ್ನು ಕವಿ ಆರೋಪಿಸುವುದರಲ್ಲಿ ಅರ್ಥವಿದೆ.

ಹತ್ತಾರು ವರ್ಷ ಕಟ್ಟಿದ ಮನೆ ಮಾರು, ಸಂಸ್ಕೃತಿ ನಾಗರೀಕತೆ ಈ ಭೈರವನ ಆವೇಶಕ್ಕೆ ಕ್ಷಣ ಮಾತ್ರದಲ್ಲಿ ನಾಶವಾಗುತ್ತವೆ. ವರ್ಷಕ್ಕಾಗುವಷ್ಟು ದವಸ ಧಾನ್ಯಗಳನ್ನು ತಲೆಯಲ್ಲಿ ತೂಗಿ ತೊನೆಯುತ್ತಾ ಪ್ರಾಣಿ, ಪಕ್ಷಿ, ಮನುಷ್ಯರ ತುತ್ತಿನ ಚೀಲವನ್ನು ತುಂಬುವ ಭರವಸೆಯನ್ನು ಹೊತ್ತ ಸಸ್ಯ ಸಂಪತ್ತು ವರ್ಷ ಭೈರವನ ಆವೇಶಕ್ಕೆ ಕ್ಷಣ ಮಾತ್ರದಲ್ಲಿ ಮಣ್ಣಾಗಿ ನಾಶವಾಗುತ್ತದೆ. ನಿಜವಾದ ಪ್ರಳಯ ವೆಂದರೆ ಇದೇ ಅಲ್ಲವೆ? ಜೀವಿಗಳಿಗೆ ಅನ್ನ ಸಿಕ್ಕದ ಹಾಗೆ ಮಾಡುವುದು; ಸೂರು ಇಲ್ಲದ ಹಾಗೆ ಮಾಡುತ್ತದೆ. ರಕ್ತ ಸಂಬಂಧಿಗಳು ಸ್ನೇಹಿತರು ನೆರೆಹೊರೆಯವರನ್ನು ಕೊಚ್ಚಿಕೊಯ್ದು ಇಲ್ಲವಾಗಿಸುತ್ತದೆ. ಎಲ್ಲೆಲ್ಲೂ ನೀರೇ ನೀರಾಗುತ್ತದೆ. ಅದು ಕುಡಿಯಲು ಅಯೋಗ್ಯವಾಗುತ್ತದೆ. ನೀರಿನ ಮಧ್ಯೆ ನಿಂತು ನೀರಿಗಾಗಿ ಮೊರೆ ಇಡುವಂತೆ ಮಾಡುತ್ತದೆ. ಆ ನೀರು ನಿಂತು ಕೊಳೆತು ಮಾರಕ ರೋಗಾಣುಗಳನ್ನು ಸೃಷ್ಟಿಸುತ್ತದೆ. ರೋಗಗಳು ಜೀವಿಗಳನ್ನು ಹಿಂಡಿ ಹಿಪ್ಪೆ ಮಾಡಿ ಕಾಡಿ ಸಾವಿನಂಚಿಗೆ ನೂಕುತ್ತವೆ. ಜೀವಿ ಅಸಹಾಯಕವಾಗುತ್ತದೆ; ನೋವು ನರಕ ಅನುಭವಿಸಿ ಸಾವನ್ನು ತಾನೇ ಮೊರೆಯಿಟ್ಟು ಕರೆಯುವಂತೆ ಮಾಡುತ್ತದೆ.

ಇದನ್ನು 'ಪ್ರಳಯ'ವೆಂದು ಕರೆಯುವುದರಲ್ಲಿ ಅರ್ಥವಿದೆ. ಜಲ ಪ್ರಳಯದ ಹತ್ತಾರು ಪ್ರಕರಣಗಳು ಪ್ರತಿವರ್ಷ ಜಗತ್ತಿನ ಹಲವೆಡೆ ಸಂಭವಿಸುತ್ತವೆ. ಈ ಜಲ ಪ್ರಳಯಕ್ಕೆ ಪ್ರಕೃತಿಯ ನಾನಾ ಆಗು ಹೋಗುಗಳು ಕಾರಣ ಎಂಬುದು ಪ್ರಕೃತಿಯ ಮೇಲೆ ಮಾನವ ನಡೆಸುತ್ತಿರುವ ದೌರ್ಜನ್ಯ ಕಾರಣವೆಂದು ಕೆಲವರು ವಾದಿಸುತ್ತಾರೆ. ಆದರೆ ಮಾನವ ಚರಿತ್ರೆಯನ್ನು ಅಧ್ಯಯನ ಮಾಡಿದವರಿಗೆ, ಪ್ರಕೃತಿಯ ವಿಕಾಸವನ್ನು ಅಧ್ಯಯನ ಮಾಡಿದವರಿಗೆ ಇದು ಈಗೀಗ ಸಂಭವಿಸುತ್ತಿರುವ ಪ್ರಕೃತಿ ವಿಶೇಷಗಳೆಂದು ಅನಿಸುವುದಿಲ್ಲ. ನಿರಂತರವಾಗಿ ನಡೆದುಕೊಂಡು ಬರುತ್ತಿರುವ ಈ ಭೈರವನ ರುದ್ರನರ್ತನಕ್ಕೆ ಪ್ರಕೃತಿ ತನ್ನನ್ನು ತಾನು ನಿಯಂತ್ರಿಸಿಕೊಳ್ಳಲು ನಡೆಸುತ್ತಿರುವ ಗೂಢ ಕ್ರಿಯೆಗಳಿರಬಹುದು. ತನ್ನ ಎಲ್ಲ ಮಕ್ಕಳು ಸಮಾನವಾಗಿ ಬಾಳಲೆಂದು ನಿರ್ಧರಿಸಿ 'ಕೆಲವರನ್ನು ಎತ್ತುವ ಮತ್ತೆ ಕೆಲವರನ್ನು ತುಳಿವ' ದೃಷ್ಟಿಯಿರಬಹುದು.

ಜಲ ಪ್ರಳಯಗಳನ್ನು ನಾಶಕಾರಕಗಳೆಂದು ಭಾವಿಸಬಾರದು. ಪ್ರತಿ ಸಾವಿನಲ್ಲೂ ಜೀವ ಮೊಳಕೆಯೊಡೆಯುತ್ತದೆಯೆಂಬ ಸತ್ಯವನ್ನು ಒಪ್ಪಬೇಕು. ಬೆಂದು ಬೆಂಗಾಡಾಗಿದ್ದ ನೆಲಕ್ಕೆ ವಿಪುಲ ನೀರ ರಾಶಿಯನ್ನು ತುಂಬಿ ನೂರಾರು ವರ್ಷದ ಜೀವ ದ್ರವ್ಯವನ್ನು ಹರಿಸುವ ಆ ಶಕ್ತಿಗೆ ನಮೋ ಎನ್ನಬೇಕು.

■ ಶಿಕಾಕು

# ಮಾತೇ ಮುತ್ತು

ಅನ್ಯಾಯ ಮಾಡುವವನು ಅದನ್ನು ಅನುಭವಿಸುವವನಿಗಿಂತ ಹೆಚ್ಚು ದುಃಖಿಯಾಗಿರುತ್ತಾನೆ.
-ಪ್ಲೇಟೋ

ಮನುಷ್ಯನು ಸ್ವಶಕ್ತಿಯಿಂದಲೇ ಗೌರವವನ್ನು ಹೊಂದುತ್ತಾನೆ.
-ಕಥಾಸರಿತ್ಸಾಗರ

ಸಜ್ಜನರು ತಮಗೆ ಮಾಡಿದ ಉಪಕಾರವನ್ನು ಮರೆತುಬಿಡುವುದಿಲ್ಲ.
-ವಿಕ್ರಮಚರಿತ

ಜನರ ಬಹುಮತ ಇದ್ದಲ್ಲೆಲ್ಲ ಪ್ರಜಾಸತ್ತೆ ಇದೆ ಎಂದು ಹೇಳಲಾಗುವುದಿಲ್ಲ.
-ವಿ.ಸೀತಾರಾಮಯ್ಯ

ಪ್ರಜಾಪ್ರಭುತ್ವಗಳು ಅತಿವೈಭವದಿಂದಲೂ, ರಾಜಪ್ರಭುತ್ವಗಳು ಬಡತನದಿಂದಲೂ ನಾಶವಾಗುತ್ತವೆ.
-ಮಾಂಟೆಸ್ಕ್ಯೂ

ಮತ್ತೆ ಮತ್ತೆ ಯಾವ ಪುಸ್ತಕ ಓದುತ್ತೇವೆಯೋ ಅದು ಉತ್ತಮವಾದ ಪುಸ್ತಕ.
-ಜಾನ್ ರಸ್ಕಿನ್

ಅಶ್ಲೀಲ ಪುಸ್ತಕ, ಶೀಲ ಉಳ್ಳ ಪುಸ್ತಕ ಎಂದಿಲ್ಲ; ಚೆನ್ನಾಗಿ ಬರೆದ ಪುಸ್ತಕ, ಕೆಟ್ಟದಾಗಿ ಬರೆದ ಪುಸ್ತಕ– ಅಷ್ಟೇ ಇರುವುದು.
-ಆಸ್ಕರ್ ವೈಲ್ಡ್

ಪ್ರೇಮವೊಂದು ಆಭಾಸ, ಒಂದು ಅಂಧವಿಶ್ವಾಸ.
-ಗೋಪಾಲಕೃಷ್ಣ ಅಡಿಗ

ಪ್ರೇಮ, ಬೆಂಕಿಯಂತೆ ಎಲ್ಲವನ್ನೂ ಪವಿತ್ರವಾಗಿಸುತ್ತದೆ.
-ಎಸ್.ರಾಧಾಕೃಷ್ಣನ್

ಮೊಗ್ಗನ್ನು ಅರಳಿಸಿ ಜಗತ್ತಿಗೇ ಅದರ ಸೌಂದರ್ಯ, ನಸುಗಂಪನ್ನು ನೀಡುವುದು ಪ್ರೇಮ; ಅರಳಿದ ಹೂವನ್ನು ಬಾಡಿಸಿ ಕೊಲ್ಲುವ ಬಿಸಿಲು ಕಾಮ.
-ತರಾಸು

ವಿವೇಚನೆ ಕಳೆದುಕೊಳ್ಳದ ಪ್ರೇಮಿ, ಪ್ರೇಮಿಯೇ ಅಲ್ಲ.
-ಥಾಮಸ್ ಹಾರ್ಡಿ

ಪ್ರೇಮಕ್ಕೆ ಪರಿಹಾರ– ಹೆಚ್ಚು ಪ್ರೇಮಿಸುವುದೊಂದೇ.
-ಡೇವಿಡ್ ಹೆನ್ರಿ ಥೋರೋ

ಘನಕಾರ್ಯಗಳನ್ನು ನಮ್ಮಿಂದ ಮಾಡಿಸಬಲ್ಲ ಶಕ್ತಿ ಉಳ್ಳದ್ದು– ಪ್ರೇಮ ಹಾಗೂ ಆಸೆ.
-ಗಯಟೆ

ಯಾರ ಬದುಕಿನ ಅಂಗಳದಲ್ಲಿ ಯಾರು ಇಡುವರೋ ಬತ್ತಿ, ಅದು ಸಿಡಿದಾಗಲೇ ಗೊತ್ತು ಬತ್ತಿ ಇಟ್ಟವನ ಯುಕ್ತಿ.
-ತರಳಬಾಳು ಡಾ.ಶಿವಮೂರ್ತಿ ಸ್ವಾಮೀಜಿ

ಒಬ್ಬ ಪಂಡಿತ ಮತ್ತೊಬ್ಬ ಪಂಡಿತನನ್ನು ನೋಡಿ ನಾಯಿಯಂತೆ ಗುರ್ ಎನ್ನುತ್ತಾನೆ.
-ಸಂಸ್ಕೃತ ನೀತಿ ವಾಕ್ಯ